## <u>ಹಿರಿಯ ನಾಗರೀಕರಿಗೆ ಪಾಸುಗಳ ಯೋಜನೆ:</u>

ಸರ್ಕಾರದ ಆದೇಶದಂತೆ, **60 ವರ್ಷ ಮತ್ತು ಮೇಲ್ಪಟ್ಟ ರಾಜ್ಯದ ಹಿರಿಯ ನಾಗರೀಕರಿಗೆ ಬಸ್ ಪ್ರಯಾಣ ದರದಲ್ಲಿ ಶೇ.25 ರಷ್ಟು ದರ ರಿಯಾಯಿತಿಯನ್ನು** ನೀಡಲಾಗುತ್ತಿದೆ. ಸದರಿ ರಿಯಾಯಿತಿಯನ್ನು ಪಡೆಯಲು ಹಿರಿಯ ನಾಗರಿಕರು ಸಂಸ್ಥೆಯ ವತಿಯಿಂದ ವಿತರಿಸಲಾಗುತ್ತಿರುವ ಉಚಿತ ಗುರುತಿನ ಚೀಟಿಯನ್ನು ಪಡೆದು ಸಂಸ್ಥೆಯ ನಗರ, ನಗರ ಹೊರವಲಯ, ಸಾಮಾನ್ಯ, ವೇಗದೂತ, ಅರೆಸುವಿಹಾರಿ ಮತ್ತು ರಾಜಹಂಸ ಸಾರಿಗೆಗಳಲ್ಲಿ ಅಂತರ ರಾಜ್ಯ ಪ್ರಯಾಣವೂ ಸೇರಿದಂತೆ ರಿಯಾಯಿತಿ ದರದಲ್ಲಿ ಪ್ರಯಾಣಿಸಲು ಅವಕಾಶ ಕಲ್ಪಿಸಲಾಗಿದೆ. ಸದರಿ ದರ ರಿಯಾಯಿತಿಯನ್ನು ಪಡೆಯಲು ಸಂಸ್ಥೆಯು ವಿತರಿಸುವ ಗುರುತಿನ ಚೀಟಿಯನ್ನಲ್ಲದೆ ಅಂಗವಿಕಲರ ಮತ್ತು ಹಿರಿಯ ನಾಗರೀಕರ ಕಲ್ಯಾಣ ನಿರ್ದೇಶನಾಲಯದವರು ವಿತರಿಸಿರುವ ಭಾವಚಿತ್ರವಿರುವ ಗುರುತಿನ ಚೀಟಿ(60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ), ಮೂಲ ಚಾಲನಾ ಪರವಾನಿಗೆ, ರಾಜ್ಯ ಚುನಾವಣಾ ಆಯೋಗದವರು ವಿತರಿಸಿರುವ ಮೂಲ ಗುರುತಿನ ಚೀಟಿ, ಪಾಸಪೋರ್ಟ ಇವುಗಳಲ್ಲಿ ಯಾವುದಾದರೊಂದನ್ನು ತೋರಿಸಿ ಪ್ರಯಾಣಿಸಬಹುದಾಗಿದೆ.

ಸಂಸ್ಥೆಯು ತನ್ನ ಸಾಮಾಜಿಕ ಹೊಣೆಗಾರಿಕೆಯಡಿಯಲ್ಲಿ ವಿವಿಧ ದರ್ಜೆಯ ಉಚಿತ/ರಿಯಾಯಿತಿ ಬಸ್ ಪಾಸುಗಳನ್ನು ವಿತರಿಸುತ್ತಿದ್ದು,